**ದಿನಾಂಕಃ 14.01.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟೀ ಸವಾಲು: 2 ನೇ ಎದುರುದಾರರ / Insurance company ಪರ ವಕೀಲರಾದ ಶ್ರೀ.SNR ರವರಿಂದಃ**

1) ಅಪಘಾತದ ಸಮಯದಲ್ಲಿ ನನ್ನ ಗಂಡ ಆದಂತಹ ರವಿ ರವರಿಗೆ **41** ವರ್ಷ ವಯಸ್ಸು ಆಗಿತ್ತು ಎಂದರೆ ಸರಿ.

2) ನಾನು ಯಾವುದೇ ವಿದ್ಯಾಭ್ಯಾಸವನ್ನು ಮಾಡಿರುವುದಿಲ್ಲ. ನನ್ನ ಗಂಡನು **9** ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿದ್ದರು. ಅಪಘಾತದ ಸಮಯದಲ್ಲಿ ನನ್ನ ಗಂಡನು ಚಾಲನೆ ಮಾಡುತ್ತಿದ್ದಂತಹ ದ್ವಿಚಕ್ರ ವಾಹನವು ನಮಗೆ ಸೇರಿದ ವಾಹನ ಆಗಿದೆ. ದ್ವಿಚಕ್ರ ವಾಹನವನ್ನು ಚಾಲನೆ ಮಾಡಲು ಅನುಮತಿ ನೀಡುವಂತಹ ಚಾಲನಾ ಪರವಾನಗಿಯು ನನ್ನ ಗಂಡನ ಬಳಿ ಇತ್ತು. ಸದರಿ ಚಾಲನಾ ಪರವಾನಗಿಯನ್ನು ಈ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ.

3) ನನ್ನ ಗಂಡನು ಚಾಲನೆ ಮಾಡುತ್ತಿದ್ದಂತಹ ದ್ವಿಚಕ್ರ ವಾಹನಕ್ಕೆ ಯಾವ ವಿಮಾ ಸಂಸ್ಥೆಯಿಂದ ಪಾಲಿಸಿಯನ್ನು ಪಡೆದುಕೊಳ್ಳಲಾಗಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಗಂಡನ ಚಾಲನಾ ಪರವಾನಗಿ ಮತ್ತು ಆ ವಾಹನದ ವಿಮಾ ಪಾಲಿಸಿಯನ್ನು ಹಾಜರುಪಡಿಸಲು ತೊಂದರೆ ಇದೆಯೋ ಹೇಗೆ ಎಂದರೆ ಆ

ದಾಖಲೆಗಳನ್ನು ನನ್ನ ಗಂಡನು ದ್ವಿಚಕ್ರ ವಾಹನದಲ್ಲಿಯೇ ಇಟ್ಟುಕೊಂಡಿದ್ದರು. ಆ ದಾಖಲೆಗಳು ಏನಾಗಿವೆ ಎಂದು ನನಗೆ ಗೊತ್ತಿಲ್ಲ.

4) ಅಪಘಾತದ ಸಂಬಂಧವಾಗಿ ನಾನೇ ಪೋಲಿಸರಿಗೆ ದೂರನ್ನು ನೀಡಿದ್ದೇನೆ. ನನ್ನ ಗಂಡನ ಚಾಲನಾ ಪರವಾನಗಿಯು ಮತ್ತು ನನ್ನ ಗಂಡನ ವಾಹನದ ವಿಮಾ ಪಾಲಿಸಿಯು ಕಳೆದು ಹೋಗಿದೆ ಎಂಬುದಾಗಿ ಸದರಿ ದೂರಿನಲ್ಲಿ ಹೇಳಿರುವುದಿಲ್ಲ.

5) ಅಪಘಾತದ ಸಮಯದಲ್ಲಿ ನನ್ನ ಗಂಡನು ಚಾಲನೆ ಮಾಡುತ್ತಿದ್ದಂತಹ ದ್ವಿಚಕ್ರ ವಾಹನವನ್ನು ಯಾವಾಗ ಕೊಂಡು ಕೊಳ್ಳಲಾಗಿತ್ತು ಎಂದು ನನಗೆ ಗೊತ್ತಿಲ್ಲ.

6) ದ್ವಿಚಕ್ರ ವಾಹನವನ್ನು ಸರಿಯಾಗಿ ಚಾಲನೆ ಮಾಡುವಂತಹ ಕೌಶಲ್ಯವು ನನ್ನ ಗಂಡನಿಗೆ ಇರಲಿಲ್ಲ ಮತ್ತು ನನ್ನ ಗಂಡನಿಗೆ ಚಾಲನಾ ಪರವಾನಗಿಯು ಇರಲಿಲ್ಲ ಮತ್ತು ಈ ಎಲ್ಲಾ ಕಾರಣದಿಂದ ಪೋಲಿಸರ ಜೊತೆ ಶಾಮೀಲಾಗಿ ಕೆಎ-**42**-ಎ-**6335** ಸಂಖ್ಯೆಯ ಕಾರಿನ ವಿರುದ್ಧ ನಾವು ಸುಳ್ಳು ಪ್ರಕರಣವನ್ನು ಮಾಡಿದ್ದೇವೆ ಎಂದರೆ ಸುಳ್ಳು.

7) ಅಪಘಾತದ ಸಮಯದಲ್ಲಿ ನಾನು ನನ್ನ ಗಂಡನ ಜೊತೆಯಲ್ಲಿ ಇರಲಿಲ್ಲ.

8) ಅಪಘಾತದ ವಿಷಯವನ್ನು ಬೇರೆ ಯಾರೋ ದೂರವಾಣಿ ಮೂಲಕ ನನಗೆ ತಿಳಿಸಿದ್ದಾರೆ. ನಾನು ಹೋಗಿ ನೋಡಿದಾಗ ನನ್ನ ಗಂಡನು **Seven Hills** ಆಸ್ಪತ್ರೆಯಲ್ಲಿ ಇದ್ದರು. ನನ್ನ ಗಂಡನನ್ನು ಯಾರು ಆಸ್ಪತ್ರೆಗೆ ಸೇರಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ.

9) ನನ್ನ ಗಂಡನ ಅಕ್ಕನಿಗೆ ಸಹಾ ನಾನು ದೂರವಾಣಿ ಮೂಲಕ ಅಪಘಾತದ ವಿಷಯವನ್ನು ತಿಳಿಸಿದ್ದೇನೆ ಮತ್ತು ನಂತರ ಆಕೆಯು ಆಸ್ಪತ್ರೆಯ ಬಳಿ ಬಂದಿದ್ದರು.

10) ಕೆಎ**-42-**ಎ**-6335** ಸಂಖ್ಯೆಯ ಕಾರು ಅಪಘಾತವನ್ನು ಮಾಡಿದೆ ಎಂಬುದಾಗಿ ನನಗೆ ಇದುವರೆವಿಗೂ ಯಾರು ಹೇಳಿರುವುದಿಲ್ಲ.

11) ದೂರಿನಲ್ಲಿ ಬರೆದಿರುವ ವಿಷಯಗಳನ್ನು ಪೋಲಿಸರೇ ಬರೆದು ನನ್ನಿಂದ ಸಹಿ ಪಡೆದುಕೊಂಡಿದ್ದಾರೆ ಎಂದರೆ ಇರಬಹುದು. ಫಿರ್ಯಾದಿನಲ್ಲಿ ಏನು ಬರೆದಿದೆ ಎಂದು ಪೋಲಿಸರು ನನಗೆ ಓದಿ ಹೇಳಿದರು, ನಂತರ ನಾನು ಫಿರ್ಯಾದಿಗೆ ನನ್ನ ಸಹಿಯನ್ನು ಮಾಡಿದ್ದೇನೆ.

12) ಕೆಎ**-42-**ಎ**-6335** ಸಂಖ್ಯೆಯ ಕಾರು

ಅಪಘಾತವನ್ನು ಮಾಡಿದೆ ಎಂಬುದಾಗಿ ಯಾವುದೇ ಪ್ರತ್ಯಕ್ಷದರ್ಶಿಗಳು ನನಗೆ ಹೇಳಿರುವುದಿಲ್ಲ.

13) ಈ ಅಪಘಾತ ಆಗುವುದಕ್ಕಿಂತ ಮೊದಲು ಯಾವುದೇ ಸಮಯದಲ್ಲಿಯೂ ನನ್ನ ಗಂಡನಿಗೆ ಯಾವುದೇ ಶಸ್ತ್ರ ಚಿಕಿತ್ಸೆಯು ಆಗಿರುವುದಿಲ್ಲ. ಅಪಘಾತದ ಸಮಯಕ್ಕಿಂತ **7** ವರ್ಷಗಳ ಮುಂಚೆ ನನ್ನ ಮತ್ತು ರವಿ ರವರ ಮದುವೆಯು ಆಗಿತ್ತು.

14) ಆಗಾಗ ನನ್ನ ಗಂಡನಿಗೆ ಎದೆ ನೋವು ಮತ್ತು ಹೊಟ್ಟೆ ನೋವು ಬರುತ್ತಿತ್ತು ಮತ್ತು ಆ ಕಾರಣದಿಂದ ಆತನನ್ನು **2 – 3** ಬಾರಿ ಆಸ್ಪತ್ರೆಗೆ ಸೇರಿಸಲಾಗಿತ್ತು ಎಂದರೆ ಸುಳ್ಳು.

15) **Seven Hills** ಆಸ್ಪತ್ರೆಯವರು "ಇಲ್ಲಿ ಆಗುವುದಿಲ್ಲ" ಎಂದು ಹೇಳಿದರು ಮತ್ತು ಆ ಕಾರಣದಿಂದ ನನ್ನ ಗಂಡನನ್ನು **Prolife Multispeciality** ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು.

16) ಬೆಳಗಿನ ಹೊತ್ತು ನನ್ನ ಗಂಡನು ಟ್ರ್ಯಾಕ್ಟರ್ ಚಾಲನೆ ಮಾಡುವ ಕೆಲಸವನ್ನು ಮಾಡುತ್ತಿದ್ದರು ಮತ್ತು ರಾತ್ರಿ ಹೊತ್ತು ಸೆಕ್ಯೂರಿಟಿ

ಕೆಲಸಕ್ಕೆ ಹೋಗುತ್ತಿದ್ದರು. ನನ್ನ ಗಂಡನು ಸಣ್ಣಗೆ ಇದ್ದರು. ಆಸ್ಪತ್ರೆಯಲ್ಲಿ ನಾನು ನನ್ನ ಗಂಡನನ್ನು ನೋಡಿದಾಗ ಆತನ ಮೂಗಿನಲ್ಲಿ ರಕ್ತ ಬರುತ್ತಿತ್ತು. ಸದರಿ ಆಸ್ಪತ್ರೆಯಲ್ಲಿ ನನ್ನ ಗಂಡನ ಕಾಲಿಗೆ ಶಸ್ತ್ರ ಚಿಕಿತ್ಸೆಯನ್ನು ಮಾಡಿದ್ದರು.

17) ಶವ ಪರೀಕ್ಷಾ ವರದಿಯಲ್ಲಿ **heart attack** ನಿಂದ ನನ್ನ ಗಂಡನ ಮರಣವು ಸಂಭವಿಸಿದೆ ಎಂದು ಬರೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡನು ಬಿಡುವಿಲ್ಲದೇ ಕೆಲಸ ಮಾಡುತ್ತಿದ್ದರು. ನನ್ನ ಗಂಡನು ದೂಮಪಾನ ಮತ್ತು ಮದ್ಯಪಾನ ಮಾಡುತ್ತಿರಲಿಲ್ಲ.

18) ನನ್ನ ಗಂಡನು ವಿಪರೀತ ಮದ್ಯಪಾನ ಮಾಡುತ್ತಿದ್ದರು ಮತ್ತು ಆ ಕಾರಣದಿಂದ ಆತನ ಶ್ವಾಸಕೋಶಗಳು ಹಾಳಾಗಿದ್ದವು ಎಂದರೆ ಸುಳ್ಳು.

19) ದಿಃ **09.10.2024** ರಂದು ನನ್ನ ಗಂಡನು ಮರಣ ಹೊಂದಿದ್ದಾರೆ ಎಂದರೆ ಸರಿ.

20) ಅಪಘಾತದಲ್ಲಿ ಆದಂತಹ ಗಾಯಗಳ ಕಾರಣದಿಂದ ನನ್ನ ಗಂಡನು ಮರಣ ಹೊಂದಿರುವುದಿಲ್ಲ ಮತ್ತು ಆತನ ಶ್ವಾಸಕೋಶಗಳು ದುರ್ಬಲ ಆಗಿದ್ದ ಕಾರಣದಿಂದ ಮತ್ತು ಹೃದಯಾಘಾತದ ಕಾರಣದಿಂದ ನನ್ನ

ಗಂಡನು ಮರಣ ಹೊಂದಿದ್ದಾರೆ ಎಂದರೆ ಸುಳ್ಳು. ಅಪಘಾತದಲ್ಲಿ ನನ್ನ ಗಂಡನ ಕಾಲಿಗೆ ಮಾತ್ರ ಗಾಯಗಳು ಆಗಿದ್ದವು ಎಂದರೆ ಸುಳ್ಳು.

21) ನನ್ನ ಗಂಡನ ಚಿಕಿತ್ಸೆಯ ಹಣವನ್ನು ನಾನೇ ಕೊಟ್ಟಿದ್ದೇನೆ. ನಾನು ಹಾಜರುಪಡಿಸಿರುವಂತಹ ಮೆಡಿಕಲ್ ಬಿಲ್ಲುಗಳನ್ನು ನನ್ನ ಅನುಕೂಲಕ್ಕಾಗಿ ನಾನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು. ನನ್ನ ಗಂಡನ ಚಿಕಿತ್ಸೆಗಾಗಿ ಮತ್ತು ಇತರೆ ಖರ್ಚುಗಳಿಗಾಗಿ **10** ಲಕ್ಷ ರೂಪಾಯಿಗಳು ಖರ್ಚು ಆಗಿದೆ ಎಂಬುದಾಗಿ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

22) ನನ್ನ ಗಂಡನು ಒಂದು ತಿಂಗಳಿಗೆ **23** ಸಾವಿರ ರೂಪಾಯಿಗಳನ್ನು ಸಂಪಾದನೆ ಮಾಡುತ್ತಿದ್ದರು ಎಂಬುದಾಗಿ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು. ನನ್ನ ಗಂಡನು ಅಪಘಾತದ ಕಾರಣದಿಂದ ಮರಣ ಹೊಂದಿರುವುದಿಲ್ಲ ಮತ್ತು ಆ ನಿಜ ಸಂಗತಿಯನ್ನು ಮುಚ್ಚಿಟ್ಟು ಈ ಸುಳ್ಳು ಪ್ರಕರಣವನ್ನು ನಾವು ಮಾಡಿದ್ದೇವೆ ಎಂದರೆ ಸುಳ್ಳು.

**ಪಾಟೀ ಸವಾಲು: 1 ನೇ ಎದುರುದಾರರ ಪರ ವಕೀಲರಿಂದಃ**

ಸದರಿ ಎದುರುದಾರರು ಮತ್ತು ಅವರ ಪರ ವಕೀಲರು ಹಾಜರಿಲ್ಲ ಮತ್ತು ಯಾವುದೇ ಲಿಖಿತ ಹೇಳಿಕೆ ಸಲ್ಲಿಸಿಲ್ಲ. ಆದ ಕಾರಣದಿಂದ ಯಾವುದೇ ಪಾಟೀ

ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆ: ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.